# ವರ್ಣರಂಜಿತ ಕಡಲ ತೀರ





**ಕ**ಡಲತೀರ– ಬೀಚ್‌ಗಳೆಂದರೆ ಅಗಾಧ ಪ್ರಮಾಣದ ಜಲರಾಶಿ, ವಿಶಾಲವಾಗಿ ಹರಡಿದ ಚಿನ್ನದ ಬಣ್ಣದ ಮರಳು, ಬಗೆಬಗೆಯ ಸಮುದ್ರಜೀವಿಗಳ ನೆನಪು ಬರುತ್ತದಲ್ಲವೇ? ತಿಳಿಗುಲಾಬಿ ಇಲ್ಲವೇ ಚಿನ್ನದ ಬಣ್ಣದ ಮರಳು ಹೊಂದಿದ ಕಡಲ ತಡಿ ಸಾಮಾನ್ಯವಾಗಿ ಎಲ್ಲರೂ ನೋಡಿರುತ್ತಾರೆ. ಕಾಮನಬಿಲ್ಲಿನ ಬೀಚುಗಳು ಈ ಭೂಮಿಯ ಮೇಲಿವೆ ಎಂದರೆ ಆಶ್ಚರ್ಯವೇ!

ಪ್ರಪಂಚದ ಹಲವು ಭಾಗಗಳಲ್ಲಿ ಕೆಂಪು, ಕಪ್ಪು, ಬೂದು, ಗುಲಾಬಿ, ನೇರಳೆ, ಹಸಿರಿನ ಮರಳಿನ ಕಡಲ ಕಿನಾರೆಗಳಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಹವಾಯ್ ದ್ವೀಪದ ಪೂ ಮಹನ, ಗೌಮ್, ಗಲಪೋಗಸ್ ಬೀಚುಗಳು, ಆಲೀವ್ ಬಣ್ಣದ ಮರಳ ರಾಶಿಯಿಂದ ಪ್ರಸಿದ್ಧಿಯಾಗಿದ್ದರೆ, ಪೋರ್ಟರಿಕಾ, ಬರ್ಮುಡ, ಬಾರ್ಬಡೋಸ್‌ನ ಸಮುದ್ರ ತಟ ಗುಲಾಬಿ ಬಣ್ಣದ ಮರಳಿನಿಂದ ನೋಡುಗರನ್ನು ಮರುಳು ಮಾಡುತ್ತವೆ. ಪೋರ್ಟ್‌ಪೆರ್ರೊ, ಮಾಲ್ಟೀಸ್ ದ್ವೀಪಗಳಲ್ಲಿನ ಮರಳು ಕಿತ್ತಳೆ ಬಣ್ಣದಾಗಿದ್ದು, ಕ್ಯಾಲಿಫೋರ್ನಿಯಾದ ಗೋಲ್ಡನ್ ಗೇಟ್ ಬೀಚ್ ಕಪ್ಪು ಮರಳಿನ ದಂಡೆಗೆ ಹೆಸರುವಾಸಿ. ನಮ್ಮಲ್ಲೂ ಕಾರವಾರದ ಸಮೀಪ, ಕನ್ಯಾಕುಮಾರಿಯ ಹತ್ತಿರ ಕಪ್ಪು ಮರಳಿನ ಕಡಲ ತೀರವಿದೆ.

ಅಂದ ಹಾಗೆ, ಈ ಬೀಚುಗಳ ಮರಳಿಗೇಕೆ ಕಾಮನಬಿಲ್ಲಿನ ಬಣ್ಣ?! ಸಮುದ್ರ ದಂಡೆಯ ಬೆಟ್ಟಸಾಲುಗಳು ಹಿಂದೆಂದೋ ಜ್ವಾಲಾಮುಖಿಯನ್ನು ಉಗುಳಿ ತನ್ನ ಮಣ್ಣಿನ ಬಣ್ಣವನ್ನು ಪರಿವರ್ತಿಸಿಕೊಂಡಿರುತ್ತವೆ. ಇಂತಹ ಮಣ್ಣು, ಬಂಡೆಗಳಿಂದ ನೂರಾರು ವರ್ಷಗಳ ಕಾಲ ಜರಡಿಯಾಡಿದ ಮರಳು ತೀರದ ಉದ್ದಕ್ಕೂ ಹರಡಿಕೊಂಡು ವಿವಿಧ ಬಣ್ಣಗಳನ್ನು ಪ್ರದರ್ಶಿಸುತ್ತವೆ. ಜೊತೆಗೆ ಕೆಲವು ಭಾಗದಲ್ಲಿ ಬಣ್ಣದ ಸುಣ್ಣದ ಕಲ್ಲುಗಳಿದ್ದಲ್ಲೂ ಮರಳು ಆ ಬಣ್ಣವನ್ನೇ ಪಡೆದು ನೋಡುಗರನ್ನು ಬೆರಗುಗೊಳಿಸುತ್ತವೆ.

■ **ಅಶೋಕ ಉಚ್ಚಂಗಿ**

ಚಿತ್ರಗಳು: ರಾಕೇಶ್ ಹೊಳ್ಳ